ಹಾಕಿಸಿದ್ದರು. ಅದರಲ್ಲಿ ಭಾವೇಶ್ ಅವರನ್ನು ಕುರಿತ ಸಾಕ್ಷ್ಯಚಿತ್ರವನ್ನು ತೋರಿಸಲಾಗುತ್ತಿತ್ತು. ಆ ಮೂಲಕ ಪ್ರದರ್ಶನಕ್ಕೆ ಬಂದ ಜನರಿಗೆ ತಮ್ಮ ಈ ಮೋಂಬತ್ತಿಯ ಬಲು ದೊಡ್ಡ ಯೋಜನೆಯ ಬಗ್ಗೆ ಪೂರ್ಣ ವಿವರಗಳು ತಿಳಿಯಲಿತ್ತು. 19ರ ಆ ರಾತ್ರಿ ಯಾರಿಗೂ ಮನೆಗೆ ಹೋಗಲು ಮನಸ್ಸಿಲ್ಲ. ಒಂದಿಷ್ಟು ವಿಶ್ರಾಂತಿ ಬೇಕಿದ್ದ ಕಾರಣ ಮನಸ್ಸಿಲ್ಲದ ಮನಸ್ಸಿನಲ್ಲಿ ಎಲ್ಲರೂ ಹೊರಟರು. ಬೆಳಗ್ಗೆ ಬೇಗನೆ ಹಿಂತಿರುಗಬೇಕಿತ್ತು. ರಾತ್ರಿ ಸುಮಾರು 1.30ರ ಹೊತ್ತಿಗೆ ಸಚಿನ್ ಅವರು ಭಾವೇಶ್, ನೀತಾ, ಕುಣಾಲ್ ಮತ್ತು ಅವರ ತಂದೆಯನ್ನು ಆ ಹೋಟೆಲ್‌ನಲ್ಲಿ ಬಿಟ್ಟಾಗ, ಇಡೀ ಪುಣೆ ನಗರ ಗಾಢನಿದ್ರೆಯಲ್ಲಿತ್ತು. ಆದರೆ ಭಾವೇಶ್ ಅವರಿಗೆ ನಿದ್ರೆಯ ಸುಳಿವಿಲ್ಲ. ಅವರು ಎಷ್ಟು ಉತ್ಸಾಹ–ಉದ್ವೇಗದಲ್ಲಿದ್ದರು ಎಂದರೆ ಮರುದಿನ ಅವರಿಗೆ ನೊಬೆಲ್ ಪುರಸ್ಕಾರವೇ ಸಿಗಲಿದೆ ಎಂಬಂತಿತ್ತು. ಇಡೀ ರಾತ್ರಿ ಅವರಿಗೆ ನಿದ್ರೆ ಬರಲೇ ಇಲ್ಲ. ನೀತಾ ಎರಡು ಮೂರು ಬಾರಿ ಎದ್ದು 'ಎರಡು ಗಂಟೆಗಳಾದರೂ ಮಲಗಿ, ನಾಳೆ ನಿಮಗೆ ತುಂಬಾ ಕೆಲಸವಿದೆ' ಎಂದು ಒತ್ತಾಯಿಸಿದರು. ಆದರೆ ಆ ಅರ್ಧ ರಾತ್ರಿಯಲ್ಲಿ ಭಾವೇಶ್ ಬಿಟ್ಟ ಕಣ್ಣು ಬಿಟ್ಟಂತೆ ಕನಸು ಕಾಣುತ್ತಿದ್ದರು!

ಹತ್ತಿರದಲ್ಲಿಯೇ ಎಸ್.ಪಿ. ಕಾಲೇಜ್ ಇದ್ದಿತು. ಅದರಲ್ಲಿ ಏನಿಲ್ಲವೆಂದರೂ ಸುಮಾರು ನಾಲ್ಕೈದು ಸಾವಿರ ವಿದ್ಯಾರ್ಥಿಗಳು ಇದ್ದರು. ಅವರನ್ನೂ ಪ್ರದರ್ಶನಕ್ಕೆ ಬರುವಂತೆ ಆಮಂತ್ರಿಸಲು ಸಚಿನ್ ಯೋಚಿಸಿದರು. ಡಾ. ಸಲೀಲ್ ಕುಲಕರ್ಣಿ ಮತ್ತು ಸಂದೀಪ್ ಖರೆ, ಬಲು ದೊಡ್ಡ ಪ್ರಸಿದ್ಧ ಸಂಗೀತಕಾರರೂ ಕವಿಗಳೂ ಆಗಿದ್ದರು. ಅವರು ಆನಂದ್ ವನದ ನಿಯಮಿತ ಗ್ರಾಹಕರಾಗಿದ್ದ ಕಾರಣ ಸಚಿನ್ ಅವರಿಗೆ ಪರಿಚಿತರಿದ್ದರು. ಸಚಿನ್ ಸಂಗೀತಗಾರರ ಸಹಾಯಕರೊಡನೆ ಮಾತನಾಡಿದರು. ಅವರಿಗೆ ಆಮಂತ್ರಣ ಕಳುಹಿಸಿದರು. ಅವರಿಬ್ಬರೂ ಅತಿಥಿಗಳಾಗಿ ಆಗಮಿಸುವುದೆಂದು ನಿರ್ಣಯವಾಯಿತು. ಅವರ ಕೈಯಲ್ಲಿ ರಿಬ್ಬನ್ ಕತ್ತರಿಸಿ ಪ್ರದರ್ಶನದ ಶುಭ ಆರಂಭವನ್ನು ಮಾಡುವುದು ಎಂದು ನಿರ್ಣಯವಾಯಿತು.

ಆದರೆ ಇಲ್ಲಿ ಒಂದು ಸಮಸ್ಯೆ ಎದುರಾಯಿತು. ಅವರ ಸಹಾಯಕರು, ಇಬ್ಬರಿಗೂ ತಲಾ ಹನ್ನೊಂದು ಸಾವಿರ ರೂಪಾಯಿ ಫೀಸ್ ಕೊಡಬೇಕೆಂದು ಹೇಳಿದರು. ಕಾರಣ ಅವರು ಪ್ರಸಿದ್ಧರು, ಸೆಲೆಬ್ರಿಟಿಗಳು! ಹೀಗೇ ಪುಕ್ಕಟೆಯಾಗಿ ಎಲ್ಲಿಗೂ ಹೋಗುವುದಿಲ್ಲ. ಅವರಿಗೆ ಫೀಸ್ ಕೊಡುವುದಾಗಿ ಸಚಿನ್ ಆಶ್ವಾಸನೆ ನೀಡಿದರು. ಸಚಿನ್ ಅವರಿಗೆ ಗೊತ್ತಿತ್ತು, ಭಾವೇಶ್ ಅವರ ಬಳಿ ಹಣವಿಲ್ಲ. ಸಾಲದ್ದಕ್ಕೆ, ಈ ಪ್ರದರ್ಶನದ ತಯಾರಿಯಲ್ಲಿ ಸಾಲವೂ ಆಗಿತ್ತು. ಕಚ್ಚಾ ಸಾಮಾಗ್ರಿ ಕೊಂಡವರಿಗೆ ಕೊಡುವ ಹಣ ಇನ್ನೂ ಸಾಕಷ್ಟಿತ್ತು. ಸಂಗೀತಗಾರರಿಗೆ ಈ ಪ್ರದರ್ಶನದ ನಂತರ ಹಣ ಕೊಡುವುದಾಗಿ ಆಶ್ವಾಸನೆ ನೀಡಿದರು. ಸಚಿನ್ ಅವರಿಗೆ ಅನುಭವ ಮತ್ತು ದೂರದೃಷ್ಟಿ ಇತ್ತು. ಅವರು ಕಾಕಾ ಹಲ್ವಾಯಿ, ಆಪ್ಟೆ, ಕಾನಡೆ,



ಭಾವೇಶ್‌ರ ಬದುಕಿಗೆ ಬೆಳಕು ತಂದವರಲ್ಲಿ ಒಬ್ಬರಾದ ಡಾ. ಸಚಿನ್

ಜ್ಯುವೆಲರ್ಸ್, ಮಹಾರಾಷ್ಟ್ರ ಬ್ಯಾಂಕ್, ಡಿ.ಎಸ್. ಕೆ. ಬಿಲ್ಡರ್ ಮುಂತಾದವರನ್ನು ಪ್ರದರ್ಶನದ ಪ್ರಾಯೋಜಕರನ್ನಾಗಿ ಮಾಡಿ, 7080 ಸಾವಿರ ರೂಪಾಯಿಗಳನ್ನು ಸಂಗ್ರಹಿಸಿದ್ದರು. ಇದರಿಂದ ಸಾರಿಗೆ ಖರ್ಚು, ಹಾಲ್‌ನ ಬಾಡಿಗೆ, ಊಟ ತಿಂಡಿಯ ಖರ್ಚು ಜೊತೆಗೆ ಉಳಿದ ಸಣ್ಣ ಪುಟ್ಟ ಯಾವುದೇ ಖರ್ಚು ಪೂರೈಸಲಿತ್ತು. ಸಚಿನ್ ಅವರು ಭಾವೇಶ್ ಅವರನ್ನು ಈ ಎಲ್ಲ ತಲೆನೋವುಗಳಿಂದ ದೂರವಿಟ್ಟು, ಭಾವೇಶ್ ಕೇವಲ ಮೋಂಬತ್ತಿ ತಯಾರಿಕೆಯತ್ತ ತಮ್ಮೆಲ್ಲ ಗಮನವನ್ನು ತೊಡಗಿಸುವಂತೆ ನೋಡಿಕೊಂಡಿದ್ದರು. ತಮ್ಮ ಮೇಲಿಟ್ಟ ವಿಶ್ವಾಸ ಭರವಸೆಯನ್ನು ಉಳಿಸಿಕೊಳ್ಳಲು ಭಾವೇಶ್ ಶಕ್ತಿ ಮೀರಿ ಶ್ರಮಿಸಿದ್ದರು.

ಭಾವೇಶ್ ಅವರು ಕಾಯುತ್ತಿದ್ದ ಆ ದಿನವೂ ಬಂದಿತು. ದಿನಾಂಕ 20 ಜುಲೈ 2007. ಉದ್ಘಾಟನೆಗೆ 10 ಗಂಟೆಯ ಸಮಯವನ್ನು ನಿಗದಿ ಮಾಡಲಾಗಿತ್ತು. ಬ್ಯಾನರ್‌ಗಳು, ಕರಪತ್ರಗಳು, ನ್ಯೂಸ್ ಚಾನೆಲ್ ಮತ್ತು ಸುದ್ದಿಪತ್ರಿಕೆಗಳು ತಮ್ಮ ಕೆಲಸವನ್ನು ಅದ್ಭುತವಾಗಿ ಮಾಡಿದ್ದವು. ಜನರ ಗುಂಪು ಸೇರತೊಡಗಿತ್ತು. ಇವರೆಲ್ಲರೂ ಆ ಸುಪ್ರಸಿದ್ಧರ ದಾರಿ ಕಾಯುತ್ತಿದ್ದರು. ಸಚಿನ್ ಅವರ ಯೋಜನೆಯಂತೆ, ಆ ಇಬ್ಬರು ಸೆಲೆಬ್ರಿಟಿಗಳ ಕಾರಣವಾಗಿ ಎಸ್.ಪಿ. ಕಾಲೇಜಿನ ಬಹುತೇಕ ವಿದ್ಯಾರ್ಥಿಗಳೂ ಅಲ್ಲಿದ್ದರು. 10 ಗಂಟೆಯ ಹೊತ್ತಿಗೆ ತಿಲಕ್ ಸ್ಮಾರಕದ ಅಂಗಳ ಜನರಿಂದ ತುಂಬಿ ತುಳುಕಿತ್ತು. ಕಡೆಗೂ ಆ ಗಳಿಗೆ ಬಂದಿತು. ಸುಮಾರು ಹತ್ತೂವರೆ ಗಂಟೆಗೆ ಡಾ. ಸಲೀಲ್ ಮತ್ತು ಸಂದೀಪ್ ಆಗಮಿಸಿದರು. ಟೇಪು ಕತ್ತರಿಸಿ ಪ್ರದರ್ಶನದ ಉದ್ಘಾಟನೆ ಮಾಡಿದರು. ಅಲ್ಲಿ ಒಂದು ಕಡೆ ಸಣ್ಣ ವೇದಿಕೆ ಕೂಡಾ ತಯಾರಾಗಿತ್ತು. ಅಲ್ಲಿ ಉದ್ಘಾಟನೆಯ ಭಾಷಣ ಮಾಡುತ್ತಾ ಡಾ. ಸಲೀಲ್ ಕುಲಕರ್ಣಿ ಹೇಳಿದರು, 'ನಾನು ಮೊದಲಿಗೆ ಭಾವೇಶ್ ಮತ್ತು ಸಚಿನ್ ಅವರಲ್ಲಿ ಕ್ಷಮೆ ಕೋರುತ್ತೇನೆ. ಕಾರಣ, ಇಂತಹ ಒಳ್ಳೆಯ ಕೆಲಸಕ್ಕೆ ನನ್ನ ಸ್ಟಾಫ್ ನಿಮ್ಮಲ್ಲಿ ಹಣ ಕೇಳಿದ್ದಾರೆ. ಆದರೆ ಭಾವೇಶ್ ಮತ್ತು ಸಚಿನ್ ಅವರಲ್ಲಿ ನಮ್ಮ ಸವಿನಯ ವಿನಂತಿ. ನಮಗೆ ಮೊಟ್ಟ ಮೊದಲಿಗೆ ಇಲ್ಲಿಂದ ನಾವು ತಲಾ ಹನ್ನೊಂದು ಸಾವಿರ ರೂಪಾಯಿಯ ಮೋಂಬತ್ತಿಗಳನ್ನು ಕೊಳ್ಳಲು ಅವಕಾಶ ಮಾಡಿಕೊಡಿ'. ಅತಿಥಿಗಳಾಗಿ ಆಗಮಿಸಿದವರು, ಮೋಂಬತ್ತಿಯ ಪ್ರಥಮ ಗ್ರಾಹಕರಾದರು! ಸಂದೀಪ್ ಅವರು ತಮ್ಮ ಕೆಲವು ಕವಿತೆಗಳನ್ನೂ ಓದಿ ಬಂದವರನ್ನೆಲ್ಲ ರಂಜಿಸಿದರು.

ಮಂಗೇಶ್ ತೆಂಡೂಲ್ಕರ್ ಅವರೂ ಚೆನ್ನಾಗಿ ಮಾತನಾಡಿದರು. ಅಷ್ಟೇ ಅಲ್ಲ, ಅವರು ಮೇಣದ ಮೇಲೆ ಕೊರೆಯಲು ಬೇಕಾದ ಕೆಲವು ಉಪಕರಣಗಳ ಒಂದು ಪೆಟ್ಟಿಗೆಯನ್ನು ಭಾವೇಶ್ ಅವರಿಗೆ ಉಡುಗೊರೆಯಾಗಿ ಕೊಟ್ಟರು. ಸಚಿನ್ ಮತ್ತು ರೋಹಿಣಿ ಅವರು ಆಶೀರ್ವಾದ ರೂಪದಲ್ಲಿ ಕೆಲವು ಮಾತುಗಳನ್ನು ಆಡಿದರು. ಭಾವೇಶ್ ಅವರನ್ನೂ ಈ ಎಲ್ಲ ಅತಿಥಿಗಳೊಡನೆ ವೇದಿಕೆಯ ಮೇಲೆ ಕರೆದು ಕೂಡಿಸಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದರು. ಈ ಇಡೀ ಉದ್ಘಾಟನಾ ಸಮಾರಂಭವನ್ನು ವರದಿ ಮಾಡಲು ಪ್ರಸಿದ್ಧ ಸುದ್ದಿಪತ್ರಿಕೆಗಳ ವರದಿಗಾರರು ಅಲ್ಲಿ ಉಪಸ್ಥಿತರಿದ್ದರು. ಉದ್ಘಾಟನೆಯ ಕಾರ್ಯಕ್ರಮ ಮುಗಿಯಲಿಕ್ಕಿಲ್ಲ, ಕಾದ ಜನರ ಗುಂಪು ಮೋಂಬತ್ತಿಗಳನ್ನು ನೋಡಲು, ಖರೀದಿಸಲು ಮುಗಿಬಿದ್ದಿತು.

ಹಿಂದಿನ ದಿನ ಸ್ಟಾಲ್‌ಗಳನ್ನು ಜೋಡಿಸುವಾಗ, ಬಹಳಷ್ಟು ಜನ ಕುತೂಹಲದಿಂದ ಸಭಾಂಗಣದ ಒಳಗೆ ಬಂದಿದ್ದರು. ಅವರು ಆಗಲೇ ಮೋಂಬತ್ತಿಗಳನ್ನು ಕೊಳ್ಳುವ ಇಚ್ಛೆ ವ್ಯಕ್ತಪಡಿಸುತ್ತಿದ್ದರು. ಭಾವೇಶ್ ಅವರಲ್ಲಿ ಆರು ಟ್ರಕ್‌ಗಳಷ್ಟು ತಯಾರಿಸಿದ ಸಾಮಗ್ರಿ ಇತ್ತು. ಗ್ರಾಹಕರು ಎದುರಿಗೆ ಇರುವಾಗ ಇಲ್ಲ ಎಂದೇಕೆ ಹೇಳುವುದು? ಆ ದಿನವೇ ಮೋಂಬತ್ತಿ ಮಾರಲು ಆರಂಭಿಸಿಬಿಟ್ಟಿದ್ದರು. ಹತ್ತು ಹನ್ನೆರಡು ಜನ ಸ್ವಯಂಸೇವಕರು ಮೋಂಬತ್ತಿ ಮಾರುವುದರಲ್ಲಿ ತೊಡಗಿದ್ದರು. ಇದರಿಂದಲೇ ಪ್ರದರ್ಶನ ಸಫಲವಾಗುವುದು ಎಂಬ ಆತ್ಮವಿಶ್ವಾಸ ಎಲ್ಲರಲ್ಲೂ ಮೂಡಿತ್ತು. ಸಚಿನ್ ಅವರ ತಾಯಿ ರೋಹಿಣಿ ವೈದ್ಯ ಅವರು ಗ್ರಾಹಕರಿಂದ ಹಣ ತೆಗೆದುಕೊಳ್ಳುವ ವ್ಯವಸ್ಥೆಯನ್ನು ತಮ್ಮ ಕೈಗೆ ತೆಗೆದುಕೊಂಡಿದ್ದರು.

ಈ ದಿನ ಜುಲೈ 20ನೇ ತಾರೀಕು, ಪ್ರದರ್ಶನ ಎಷ್ಟು ಜೋರಾಗಿ ಆರಂಭವಾಯಿತು ಎಂದರೆ, ಯಾರಲ್ಲಿಯೂ ಊಟಕ್ಕೆ ಹೋಗಲೂ ಸಮಯವಿರಲಿಲ್ಲ. ಸಚಿನ್ ಅವರ ನಾಲ್ಕು ವರ್ಷದ ಮಗಳು ಅನ್ವಿತಾ ಅಂತೂ ಎಲ್ಲಿಲ್ಲದ ಉತ್ಸಾಹದಲ್ಲಿದ್ದಳು. ಆಕೆ ತನ್ನಂತೆಯೇ ಪುಟ್ಟ ಸ್ನೇಹಿತರ ಜೊತೆಗೂಡಿ, ಸ್ಟಾಲ್‌ನಲ್ಲಿ ನಿಂತ ಸ್ವಯಂಸೇವಕರಿಗೆ ತಿಂಡಿಯ ಪೊಟ್ಟಣಗಳನ್ನು ತಲುಪಿಸುತ್ತಾ ಪೂರಾ ಹಾಲ್‌ನಲ್ಲಿ ಸಂಭ್ರಮದಿಂದ ಸರಿದಾಡಿದಳು. ಆ ಪುಟ್ಟ ಪಾದಗಳು ಉತ್ಸಾಹದ ಬುಗ್ಗೆಯಾಗಿ ಆ ದೊಡ್ಡ ಹಾಲ್‌ನಲ್ಲಿ ಓಡಿ ನಡೆದಾಡಿದ್ದವು. ಆ ದಿನ, ರಾತ್ರಿ ಯಾವಾಗ